ಇಬ್ಬರು ಭಯದಿಂದ ಒಬ್ಬರನ್ನೊಬ್ಬರು ನೋಡಿಕೊಂಡರು. ಇಬ್ಬರ ಬಾಯಿಗೆ ಬೀಗ ಬಿದ್ದಿತು. ಕಾರು ಗೊಲ್ಲಹಳ್ಳಿ ದಾಟಿ ರಾಜಣ್ಣಪೇಟೆಯ ದಾರಿ ಹಿಡಿಯಿತು. ಸಿರಿಸಿಲ್ಲದಿಂದ ಇಲ್ಲಿವರೆಗೆ ಬಂದದ್ದು ಒಂದು ಥರ. ಇಲ್ಲಿಂದ ವೀರನಹಳ್ಳಿಗೆ ಹೋಗುವುದೇ ಈಗ ಇರೋದು. ಮಳೆಯಿಂದ ರಸ್ತೆ ಕೆಸರುಮಯವಾಗಿದೆ. ಕತ್ತಲು ಬೇರೆ. ಮಳೆ ಸ್ವಲ್ಪ ನಿಂತಿದೆಯೆನಿಸಿದರೂ ಆಕಾಶದಲ್ಲಿ ಇನ್ನೇನು ಮತ್ತೆ ಮಳೆ ಕುಂಬರಿಸುತ್ತದೆ ಎನ್ನುವಷ್ಟು ದಟ್ಟ ಮೋಡಗಳು ಕವಿದಿವೆ. ಗುಳಿಗಳು ಬಿದ್ದಿರುವ ರಸ್ತೆಯಲ್ಲಿ ದೋಣಿ ಅಲುಗಾಡುವಂತೆ ತೂಗಾಡುತ್ತಿದೆ ಕಾರು. ಸುಮ್ಮನೆ ಬೈದೆ ಎಂದುಕೊಂಡೋ ಏನೋ ದೊರೆಸಾನಿ, 'ಬಾಲುಗಾ... ಮಗಳ ಮದುವೆ ಯಾವಾಗ ಮಾಡುತ್ತೀಯೋ... ಎಲ್ಲಾದರೂ ಕುದುರಿದೆಯಾ...' ಕೇಳಿದಳು.

ಮಾತನಾಡಿದ್ದೇ ಸಾವಿರ ವರಹ ಸಿಕ್ಕಂತಾಗಿ ಬಹಳ ಗೌರವದಿಂದ, 'ಎಲ್ಲಿ ಅಮ್ಮಾವ್ರೇ.. ನಿಮಗೆ ತಿಳಿಯದೆಯೇ ಕುದುರುತ್ತದಾ.. ದೊಡ್ಡಮಗಳ ಲಗ್ನ ನಿಮ್ಮಿಂದಾಗಿಯೇ ಆಯಿತು. ಇದಕ್ಕೂ ಹಾಗೇ ಸ್ವಲ್ಪ ಸಹಾಯ ಮಾಡಿದರೆ ಗಡ್ಡೆಗೆ ಬೀಳುತ್ತೇನೆ...' ಎಂದನು.

'ನೀನು ನಿಶ್ಚಯ ಮಾಡಿಕೊಳ್ಳೋ... ವರದಕ್ಷಿಣೆ ಖರ್ಚು ನಿನ್ನದು, ಇತರ ಖರ್ಚುಗಳು ನನ್ನದು. ಮತ್ತೆ ಈ ಬೊಂದಯ ಯಾವಾಗ ಮಾಡಿಕೊಳ್ಳುತ್ತಾನಂತೆ. ಏಯ್ ಹುಡುಗಾ, ಬೇಗ ಮಾಡಿಕೊಳ್ಳೋ... ನಿಮ್ಮ ಅಮ್ಮನಿಗಿಷ್ಟು ಆಸರೆಯಾಗಿರುತ್ತದೆ... ಒಬ್ಬಳೇ ಸಾಯುತ್ತಿದ್ದಾಳೆ' ಎಂದಳು ಗದರಿಸುತ್ತಾ.

ಬೊಂದಯ ನಾಚಿ ನೀರಾದನು. ಬಾಲಯ್ಯ, 'ಏನ್ ಆಸೆ ಗೊತ್ತಾ ದೊರೆಸಾನಿ... ಇವನಿಗೆ ಓದಿರುವ ಹುಡುಗಿ ಬೇಕಂತೆ... ಎಲ್ಲಿ ಸಿಗುತ್ತಾಳೆ...' ವ್ಯಂಗ್ಯದಿಂದ ಹೇಳಿದನು.

ಚಿಕ್ಕ ದೊರೆಸಾನಿ ಕಿಸಕ್ಕನೆ ನಕ್ಕಳು. ಬೊಂದಯನಿಗೆ ಕೋಪ ಬಂದಿತು. 'ನಾನೇನು ಹಾಗೆ ಹೇಳಿದ್ದೀನಾ ಕಾಕಾ ನಿನಗೆ...' ಎಂದು ಬಾಲಯ್ಯನನ್ನು ಕೇಳಿದನು.

'ನಿನ್ನ ಅಪ್ಪ ಓದಬೇಕು ಓದಬೇಕು ಎಂದು ಎಲ್ಲರಿಗೂ ಕಿವಿಯೂದುತ್ತಿದ್ದ. ನನ್ನ ಮಗ ಓದಿದ, ಅವನಿಗೀಗ ತನ್ನನ್ನು ಮದುವೆ ಮಾಡಿಕೊಳ್ಳುವ ಹುಡುಗಿಯೂ ಓದಿರಬೇಕೆಂದು ಹಟ...' ಎಂದ ಬಾಲಯ್ಯ. ಕತ್ತಲು ಆವರಿಸಿತು. ಮತ್ತೆ ಮಳೆ ಹನಿಯಲಾರಂಭಿಸಿತು. ಹಾಗೂ ಹೀಗೂ ಕಾರು ರಾಜನ್ನ ಪೇಟೆ ದಾಟಿತು. ಅಲ್ಲಿಂದ ದಾರಿ ಮತ್ತಷ್ಟು ಕೆಸರುಮಯವಾಗಿದೆ. ಊರು ದಾಟುತ್ತಿದ್ದಂತೆ ಕಾಡು ಮೊದಲಾಯಿತು. ದೊಡ್ಡ ದೊಡ್ಡ ಗುಡ್ಡಗಳು. ಗುಡ್ಡಗಳ ಮೇಲೆ ಮರಗಳು. ದಾರಿಗಡ್ಡವಾಗಿ ಓಡುತ್ತಿರುವ ನವಿಲುಗಳು. ಕಾರಿನ ಲೈಟ್ ಬೆಳಕಿನಿಂದಾಗಿ ಅಲ್ಲಲ್ಲಿ ನಿಲ್ಲುತ್ತಿರುವ ಮೊಲಗಳು. ಗುಂಪು ಗುಂಪಾಗಿ ಹೋಗುತ್ತಿರುವ ಕಾಡು ಹಂದಿಗಳು.

ನಿಂತಿದ್ದ ಮೊಲವೊಂದನ್ನು ನೋಡಿ ಕಾರು ನಿಲ್ಲಿಸಿ ನಿಧಾನವಾಗಿ, 'ಹಿಡಿಯೋಣಾ ಕಾಕಾ...' ಎಂದ ಬೊಂದಯ.

'ಏಯ್ ಹುಡುಗಾ... ನಿನಗೇನು ಪೈತ್ಯ ಹತ್ತಿದೆಯಾ... ಹೋಗಲಿ. ಕತ್ತಲಲ್ಲಿ ಬರುತ್ತಿರುವುದೇ ದೊಡ್ಡದು. ಅಂಥದ್ದರಲ್ಲಿ ಕಾಡಿನಲ್ಲಿ ನಿಲ್ಲಿಸೆನ್ನುತ್ತೀಯ...' ಗದರಿದಳು ದೊರೆಸಾನಿ.

ರಸ್ತೆ ತುಂಬಾ ಎತ್ತು, ತಗ್ಗುಗಳು, ಹಳ್ಳಗಳು, ಸಣ್ಣ ಸಣ್ಣ ಕಾಲುವೆಗಳು. ವೀರನಹಳ್ಳಿಗೆ ಸೇರುವ ವೇಳೆಗೆ ಒಂದು ಗಂಟೆ ಎಂದುಕೊಂಡ ಪ್ರಯಾಣ ಒಂದೂವರೆ ಗಂಟೆ ಆಯಿತು.

ಕಾರು ಇಳಿಯುತ್ತಿದ್ದಂತೆ ಬಾಲಯ್ಯ, 'ದೊರೆಸಾನಿ ಸ್ವಲ್ಪ ಬೇಗ ಮುಗಿಸಿಕೊಂಡು ಬಂದುಬಿಡಿ... ಲೇಟಾದರೆ ದೊರೆ ಕೋಪ ಮಾಡಿಕೊಳ್ಳುತ್ತಾರೆ...' ಎಂದನು.

'ಆಂ... ನಾನೇನು ಇಲ್ಲೇ ಇರಲು ಬಂದಿದ್ದೇನೆ ಅಂದುಕೊಂಡಿದ್ದೀಯಾ... ನಿಮಗಿಂತಲೂ ಹೆಚ್ಚಾಗಿ ಇಲ್ಲಿಂದ ಬೇಗ ಹೋಗಬೇಕೆಂದಿದೆ ನನಗೆ... ಮೊದಲು ನೀವು ಹೋಗಿ ತಿಂದು ಬನ್ನಿ, ಅರ್ಧ ಗಂಟೆಯಲ್ಲಿ